[ Govt. of Karnataka C.R.P. 67]

**Deposition Sheets (RP.No.57) Form No.4 (Civil)**

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 1405/2024**

ಪಿಡ್ಬ್ಲೂಃ 2 ಸಿಡ್ಲ್ಯೂಃ 2

ಸಾಕ್ಷಿದಾರನ ಹೆಸರು: ಅಣ್ಣಪ್ಪ ನಾಯಕ್

ತಂದೆಯ ಹೆಸರು: ಚಂದು

ಪ್ರಾಯ: 53 ವರ್ಷ

ಉದ್ಯೋಗ: ಎ ಎಸ್ ಐ ಕೊಲ್ಲೂರು ಪೊಲೀಸ್ ಠಾಣೆ

ವಾಸ : ಕೊಲ್ಲೂರು

ದಿನಾಂಕ 06.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು 2022 ರಿಂದ 2024 ರವರೆಗೆ ಹೆಬ್ರಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದೇನೆ.

ದಿಃ 23.06.2024 ರಂದು ನನ್ನನ್ನು ನಾಡ್ಪಾಲು ಗ್ರಾಮದ ಬೀಟ್ ಪೊಲೀಸ್ ಆಗಿ ನೇಮಿಸಿರುತ್ತಾರೆ. ಆ ದಿನ ಬಾತ್ಮಿದಾರರು ಫೋನ್ ಮಾಡಿ ಸೋಮೇಶ್ವರದ ಕಾಸನಮಕ್ಕಿ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿರುತ್ತದೆ. ಸದ್ರಿ ಮಾಹಿತಿಯನ್ನು ಚಾಸಾ-1 ರವರಿಗೆ ತಿಳಿಸಿರುತ್ತೇನೆ. ಆಗ ಚಾಸಾ-1 ರವರು ನನ್ನನ್ನು ತಕ್ಷೀರು ಸ್ಥಳದ ಹತ್ತಿರದಲ್ಲಿ ನಿಲ್ಲಲು ಹೇಳಿದ್ದರು. ಅವರು ಮತ್ತು ಸಿಬ್ಬಂದಿಗಳಾದ ಚಾಸಾ-3 ಪಂಚರನ್ನು ಕರೆದುಕೊಂಡು ಮಧ್ಯಾಹ್ನ 2.00 ಗಂಟೆಗೆ ಜೀಪನ್ನು ಮರೆಯಲ್ಲಿ ಇಟ್ಟು ನಾವೆಲ್ಲರೂ ಮರೆಯಲ್ಲಿ ನೋಡಿರುತ್ತೇವೆ. ಓರ್ವ ವ್ಯಕ್ತಿ ಸೋಮೇಶ್ವರದ ಕಾಸನಮಕ್ಕಿಯ ಸಾರ್ವಜನಿಕ ಸ್ಥಳದಲ್ಲಿ ನಿಂತುಕೊಂಡು ಅಕ್ಕಿ ಚೀಲದಲ್ಲಿ ಮದ್ಯದ ಸ್ಯಾಚೆಟ್ ಗಳನ್ನು ತುಂಬಿಸಿ 2-3 ಗ್ರಾಹಕರಿಗೆ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ.

ಮಧ್ಯಾಹ್ನ 2.15 ಗಂಟೆಗೆ ನಾವು ತಕ್ಷೀರು ಸ್ಥಳಕ್ಕೆ ದಾಳಿ ನಡೆಸಿರುತ್ತೇವೆ. ಆಗ ಅಲ್ಲಿದ್ದ 2-3 ಗಿರಾಕಿಗಳು ಓಡಿ ಹೋಗಿರುತ್ತಾರೆ. ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿದಿರುತ್ತೇವೆ. ಆತನ ಹೆಸರು ವಿಳಾಸವನ್ನುಕೇಳಿದಾಗ ಆತನ ಹೆಸರು ಪ್ರಶಾಂತ್ ಪೂಜಾರಿ ಎಂದು ತಿಳಿಸಿರುತ್ತಾನೆ. ಆತನ ಬಳಿ ಇದ್ದ ಚೀಲವನ್ನು ನೋಡಿದಾಗ ಅದರಲ್ಲಿ ಮದ್ಯದ ಸ್ಯಾಚೆಟ್ ಗಳು ಇದ್ದವು. ಆತನ ಬಳಿ ಮಾರಾಟ ಮಾಡಿ ಬಂದ ಹಣ ರೂ.930/- ಇರುತ್ತದೆ.

ಚೀಲದಲ್ಲಿದ್ದ ಮದ್ಯವನ್ನು ಪಂಚರ ಸಮಕ್ಷಮ ಸ್ವಾಧೀನಪಡಿಸಿಕೊಂಡಿರುತ್ತೇನೆ. 90 ಎಂ ಎಲ್ ನ ಮೈಸೂರು ಲ್ಯಾನ್ಸರ್ ವಿಸ್ಕಿ-22 ಸ್ಯಾಚೆಟ್ ಗಳು, 90 ಎಂ ಎಲ್ ನ ಡಬ್ಬಲ್ ಕಿಕ್ ಫೈನ್ ವಿಸ್ಕಿ-2 ಪ್ಯಾಕೆಟ್, 90 ಎಂ ಎಲ್ ನ ಒರಿಜಿನಲ್ ಚಾಯಿಸ್ -6 ಪ್ಯಾಕೆಟ್, 90 ಎಂ ಎಲ್ ನ ಒಲ್ಡ್ ಮಾಂಕ್ -5 ಪ್ಯಾಕೆಟ್, 180 ಎಂ ಎಲ್ ನ ಡಿ ಎಸ್ ಪಿ ಬ್ಲಾಕ್ ಡಿಲಕ್ಸ್ ವಿಸ್ಕಿ-5 ಗಾಜಿನ ಬಾಟಲ್, ಬಿಳಿ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲ, 100 /- ಮುಖ ಬೆಲೆಯ 5, 50 ಮುಖ ಬೆಲೆಯ 8, 10 ಮುಖ ಬೆಲೆಯ 3 ಒಟ್ಟು ನಗದು ರೂ.930/- ಮಹಜರು ಮುಖೇನ ಸ್ವಾಧೀನಪಡಿಸಿಕೊಂಡಿರುತ್ತೇನೆ. ಸ್ದ್ರಿ ಮಹಜರನ್ನು ಮಧ್ಯಾಹ್ನ 2.30 ರಿಂದ 3.30 ರವರೆಗೆ ಮಾಡಿರುತ್ತೇನೆ. ಸ್ದ್ರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ.ಈಗ ನಾನು ಸ್ದ್ರಿ ಮಹಜರನ್ನು ಹಾಗೂ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಸ್ದ್ರಿ ಮಹಜರನ್ನು ಈಗಾಗಲೇ ನಿಪಿ-1 ಎಂ ದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂ ದು ಗುರುತಿಸಲಾಯಿತು. ನಿಪಿ-2 ಭಾವಚಿತ್ರವನ್ನು ನೋಡಿ ಗುರುತಿಸಿರುತ್ತೇನೆ. ಈ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ಸ್ವಾಧೀನಪಡಿಸಿಕೊಂಡ ಮು ಮಾ 1 ರಿಂದ 7 ಸ್ವತ್ತುಗಳನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದೇನೆ.

ತಕ್ಷೀರು ಸ್ಥಳ ಮತ್ತು ಸ್ವಾಧೀಪಡಿಸಿಕೊಂಡ ಸ್ವತ್ತಿನ ಭಾವಚಿತ್ರಗಳನ್ನು ನಾನು ನನ್ನ ವಿ ವೊ ಕಂಪನಿ ಯ ಮೊಬೈಲ್ ನಿಂದ ತೆಗೆದಿರುತ್ತೇನೆ. ಅದಕ್ಕೆ ಕಲಂ 65 ಬಿ ಪ್ರಮಾಣಪತ್ರವನ್ನು ನೀಡಿರುತ್ತೇನೆ. ಈಗ ನಾನು ನೋಡಿದ ದಾಖಲೆಯು ಕಲಂ 65 ಬಿ ಪ್ರಮಾಣಪತ್ರವಾಗಿದ್ದು ಅದರಲ್ಲಿ ನನ್ನ ಸಹಿ ಇದೆ. ಸ್ದ್ರಿ ದಾಖಲೆಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದ ಃ

ದಿಃ23.06.2024 ರಂದು ನನಗೆ ನನ್ನ ಬಾತ್ಮಿದಾರರಿಂದ ಮಧ್ಯಾಹ್ನ 2.00 ಗಂಟೆಗೆ ಸೋಮೇಶ್ವರದ ಕಾಸನಮಕ್ಕಿ ಜಂಕ್ಷನ್ ನ ಬಳಿ ಸಾರ್ವಜನಿಕ ಸ್ಥಳದಲ್ಲಿ ಓರ್ವ ವ್ಯಕ್ತಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ವಿಷಯ ತಿಳಿದು ಬಂದಿರುತ್ತದೆ. ನಾನು ಈ ವಿಷಯವನ್ನು ಠಾಣಾ ಎಸ್ ಹೆಚ್ ಓ ಗೆ ತಿಳಿಸಿರುವುದಿಲ್ಲ ಆದರೆ ಚಾಸಾ-1 ರವರಿಗೆ ಮಾತ್ರ ತಿಳಿಸಿರುತ್ತೇನೆ. ನಾನು ಮಾಹಿತಿ ತಿಳಿಸಿದ ಕೂಡಲೇ 2.00 ಗಂಟೆಗೆ ಚಾಸಾ-1 ರವರು ಚಾಸಾ-3 ಮತ್ತು ಪಂಚರಾದ ಚಾಸಾ-5 ಮತ್ತು 6 ರವರೊಂದಿಗೆ ಸ್ಥಳಕ್ಕೆ ಬಂದಿರುತ್ತಾರೆ.

ಸ್ಥಳಕ್ಕೆ ಬಂದ ಕೂಡಲೇ ನಾವೆಲ್ಲರೂ ತಕ್ಷೀರು ಸ್ಥಳಕ್ಕೆ ದಾಳಿ ಮಾಡಿರುತ್ತೇವೆ. 3 ಜನ ಗಿರಾಕಿಗಳು ಇದ್ದರು ಆದರೆ ಅವರ ಮುಖ ಪರಿಚಯ ನನಗೆ ಇರುವುದಿಲ್ಲ. ನಾನು ನೀಡಿದ ಹೇಳಿಕೆಯಲ್ಲಿ 3 ಜನ ಗಿರಾಕಿಗಳು ಇದ್ದರು ಮತ್ತು ಮುಖ ಪರಿಚಯ ಇರುವುದಿಲ್ಲ ಎಂದು ಹೇಳಿರುವುದಿಲ್ಲ. ಸ್ಥಳದಲ್ಲಿ ಖಾಲಿ ಸ್ಯಾಚೆಟ್ ಗಳು ಸಿಕ್ಕಿರುತ್ತವೆ ಆದರೆ ಎಷ್ಟು ಎಂದು ಗೊತ್ತಿಲ್ಲ. ನಾವು ಸ್ಥಳದಲ್ಲಿ 2.15 ರಿಂದ 3.30 ಗಂಟೆಯವರೆಗೆ ಇದ್ದೇವು. ನಿಪಿ-1 ನ್ನು ಯಾರು ಬರೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ಚಾಸಾ-3 ರಿಂದ 6 ನಿಪಿ-2 ರಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ.

ಅದೇ ದಿವಸ ನಾನು ನನ್ನಮೊಬೈಲ್ ನಿಂದ ತೆಗೆದ ನಿಪಿ-2 ಭಾವಚಿತ್ರವನ್ನು ಕಂಪ್ಯೂಟರ್ ಮುಖೇನ ಠಾಣೆಯಲ್ಲಿ ಡೌನ್ ಲೋಡ್ ಮಾಡಿ ಪ್ರಿಂಟ್ ತೆಗೆರದಿರುತ್ತೇನೆ. ನಿಪಿ-4 ರಲ್ಲಿ ನನ್ನ ಮೊಬೈಲ್ ನ ಐ ಎಂ ಇಐ ನಂಬರ್ ನಮೂದು ಮಾಡಿರುವುದಿಲ್ಲ.

ನಾನು ನಿಪಿ-1 ರಂತೆ ಮಹಜರನ್ನು ಮಾಡುವಾಗ ಇರಲಿಲ್ಲ, ನಿಪಿ-2 ಫೋಟೊವನ್ನು ತೆಗೆದಿರುವುದಿಲ್ಲ, ಮುಖ್ಯ ವಿಚಾರಣೆಯಲ್ಲಿ ಹೇಳಿದ ದಾಳಿಯನ್ನು ಮಾಡಿರುವುದಿಲ್ಲ, ಸ್ವತ್ತನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ, ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳಿಗೆ ಮತ್ತು ಆರೋಪಿಗೆ ಯಾವುದೇ ಸಂಬಂಧ ಇಲ್ಲ ಮತ್ತು ಠಾಣೆಯ ಅಂಕಿ ಅಂಶಕ್ಕೋಸ್ಕರ ಈ ಪ್ರಕರಣ ದಾಖಲು ಮಾಡಿರುತ್ತೇವೆ ಮತ್ತು ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ